# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/34/2022 ಬಹುಮಹಡಿಗಳ ಕಟ್ಟಡ,
ಮಂಡನಾಧಿಕಾರಿಗಳ ಶಾಖೆ, ಪಿ.ಒ. ಎ.ಆರ್.ಇ.17 ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 07/07/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ ಶ್ರೀ ಕಾಶೀನಾಥ ತಂದೆ ಸಿದ್ರಾಮಯ್ಯ ಬೀದರಕರ್, ಉಪ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕಲಬುರಗಿ ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಶ್ರೀ ಜಿ. ಜಿ. ಮರಿಬಾಶೆಟ್ಟಿ, ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕಲಬುರಗಿ (ಇನ್ನು ಮುಂದೆ ದೂರುದಾರರೆಂದು ಉಲ್ಲೇಖಿಸಲಾಗುವುದು) ಇವರಿಗೆ ಬಂದ ಮಾಹಿತಿಯ ಮೇರೆಗೆ ಈ ಬಗ್ಗೆ ರಹಸ್ಯ ಮಾಹಿತಿಯನ್ನು ಸಂಗ್ರಹಿಸಿ ಸದರಿ ಸೋರ್ಸ್ ವರದಿಯನ್ನು ತಯಾರಿಸಿ, ಶ್ರೀ ಕಾಶೀನಾಥ ತಂದೆ ಸಿದ್ರಾಮಯ್ಯ ಬೀದರಕರ್, ಉಪ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕಲಬುರಗಿ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಮಾನ್ಯ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕಲಬುರಗಿ ಇವರಿಗೆ ಸಲ್ಲಿಸಿರುತ್ತಾರೆ. ಸದರಿಯವರಿಂದ ಆದೇಶ ಪಡೆದು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕಲಬುರಗಿ ಇವರು ದೂರನ್ನು ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದು, ಎದುರುದಾರರು ಅವರ ಬಲ್ಲ ಮೂಲಗಳ ಆದಾಯಕ್ಕಿಂತ ಹೆಚ್ಚಿನ ಆಸ್ತಿಗಳನ್ನು ಹೊಂದಿರುತ್ತಾರೆಂದು ತನಿಖಾಧಿಕಾರಿಗಳು ವರದಿ ಸಲ್ಲಿಸಿದ ಮೇರೆಗೆ, ದಾಖಲಾತಿಗಳನ್ನು ಪರಿಶೀಲಿಸಿದಾಗ, ಎದುರುದಾರರು ಅವರ ಸೇವಾ ಅವಧಿಯಲ್ಲಿ ಖರೀದಿಸಿದ ಆಸ್ತಿಗಳ ಬಗ್ಗೆ ಮತ್ತು ಸಾಲ ಪಡೆದ ಬಗ್ಗೆ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮಗಳನ್ನು ಪಾಲಿಸದೆ

ದುರ್ನಡತೆ ತೋರಿಸಿರುತ್ತಾರೆ ಎನ್ನುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ತನಿಖೆ ಕೈಗೊಂಡಿರುತ್ತಾರೆ.

2) <u>ಆಪಾದನೆಯ ಸಂಕ್ಷಿಪ್ತ ಸಾರಾಂಶ:-</u> ದೂರುದಾರರಾದ ಶ್ರೀ ಜಿ. ಜಿ. ಮರಿಬಾಶೆಟ್ಟಿ, ಪೋಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕಲಬುರಗಿ ರವರಿಗೆ ಬಂದ ಮಾಹಿತಿ ಮೇರೆಗೆ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಿ, ಸೋರ್ಸ್ ವರದಿಯನ್ನು ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕಲಬುರಗಿ ರವರಿಗೆ ಸಲ್ಲಿಸಿದ್ದು, ನಂತರ ಪೋಲೀಸ್ ಅಧೀಕ್ಷಕರು ಸೋರ್ಸ್ ವರದಿಯ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ, ಕಲಬುರಗಿ ಆರಕ್ಷಕ ನಿರೀಕ್ಷಕರಿಗೆ ಎದುರುದಾರರ ವಿರುದ್ಧ ಸ್ವಯಂ ದೂರು ದಾಖಲಿಸಲು ಆದೇಶ ಮಾಡಿದ್ದು, ಅದರನ್ವಯ ಕಲಬುರಗಿ ಲೋಕಾಯುಕ್ತ ಪೋಲೀಸ್ ಠಾಣೆಯ ಗುನ್ನೆ ನಂ. 09/2015 ರಲ್ಲಿ ಕಲಂ 13 (1)(ಇ) ಸಹ ಕಲಂ 13(2) ಪಿ.ಸಿ. ಕಾಯಿದೆ 1988 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ದಿನಾಂಕ 27/01/1983 ರಿಂದ ದಿ: 29/04/2015 ರ ಚೆಕ್ ಅವಧಿಯಲ್ಲಿ ಎದುರುದಾರರು, ಅವರ ಪತ್ನಿ ಹಾಗೂ ಮಗನ ಹೆಸರಿನಲ್ಲಿ ಈ ಕೆಳಕಂಡ ಸ್ಥಿರಾಸ್ತಿ ಹಾಗೂ ಚರಾಸ್ತಿಗಳನ್ನು ಸಂಪಾದಿಸಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ.

| | |
|---|---|
| 1 | ಎದುರುದಾರರು ಅವರ ಪತ್ನಿ ಶ್ರೀಮತಿ ವಿಜಯಲಕ್ಷ್ಮಿ ಇವರ ಹೆಸರಿನಲ್ಲಿ 2009-10 ರ ಸಾಲಿನಲ್ಲಿ ಕಲಬುರಗಿ ನಗರದ ರಾಜಾಪುರ ಸರ್ವೆ ನಂ. 12 ರಲ್ಲಿ 40 * 60 ಅಡಿ ವಿಸ್ತೀರ್ಣದಲ್ಲಿ ನಿವೇಶನ ನಂ. 493 ನ್ನು ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದಿಂದ ರೂ. 28,000/- ಕ್ಕೆ ಖರೀದಿ ಮಾಡಿರುತ್ತಾರೆ. ಇದನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. |
| 2 | ಎದುರುದಾರರು ಅವರ ಪತ್ನಿ ಶ್ರೀಮತಿ ವಿಜಯಲಕ್ಷ್ಮಿ ಇವರ ಹೆಸರಿನಲ್ಲಿ 2003-04 ರ ಸಾಲಿನಲ್ಲಿ ಅಫಜಲಪೂರ ತಾಲ್ಲೂಕಿನ ಗೊಬ್ಬೂರ (ಕೆ) |

| | |
|---|---|
| | ಗ್ರಾಮದ ಸರ್ವೆ ನಂ. 30 ರಲ್ಲಿ ಖರೀದಿಸಿರುವ 5 ಎಕರೆ 5 ಗುಂಟೆ ಜಮೀನನ್ನು ರೂ. 1,30,000/- ಕ್ಕೆ ಖರೀದಿ ಮಾಡಿರುತ್ತಾರೆ. ಇದನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. ಸದರಿ ತೋಟದಲ್ಲಿ ಮನೆ ನಿರ್ಮಾಣ ಮಾಡಿದ ಬಗ್ಗೆ ಯಾವುದೇ ಮಾಹಿತಿಯನ್ನು ಪೋಲೀಸರಿಗೆ ಸಲ್ಲಿಸಿದ ಮಾಹಿತಿಯಲ್ಲಿ ವಿವರಣೆ ನೀಡಿರುವುದಿಲ್ಲ. ಸದರಿ ಮನೆ ನಿರ್ಮಾಣ ಮಾಡಿದ ಮೌಲ್ಯ 12,19,000/- ಆಗುತ್ತಿದ್ದು ಈ ಬಗ್ಗೆ ಸಹಾಯಕ ಕಾರ್ಯಪಾಲಕ ಇಂಜನೀಯರ್, ಲೋಕೋಪಯೋಗಿ ಇಲಾಖೆ, ಕಲಬುರಗಿ ಇವರು ಮೌಲ್ಯ ಮಾಪನ ವರದಿ ಸಲ್ಲಿಸಿರುತ್ತಾರೆ. ಈ ಜಮೀನಿನಲ್ಲಿ ತೋಟದ ಮನೆಯನ್ನು ನಿರ್ಮಿಸಿದ ಬಗ್ಗೆ ಪೋಲೀಸರಿಗೆ ಸಲ್ಲಿಸಿದ ಸ್ಟೇಟ್‌ಮೆಂಟ್‌ಗಳಲ್ಲಿ ಯಾವುದೇ ಮಾಹಿತಿಯನ್ನು ಒದಗಿಸಿರುವುದಿಲ್ಲ ಹಾಗೂ ಸಕ್ಷಮ ಪ್ರಾಧಿಕಾರಕ್ಕೆ ವರದಿ ಮಾಡಿರುವುದಿಲ್ಲ. |
| 3 | ಎದುರುದಾರರು ಅವರ ಪತ್ನಿ ಶ್ರೀಮತಿ ವಿಜಯಲಕ್ಷ್ಮಿ ಇವರ ಹೆಸರಿನಲ್ಲಿ 2013-14 ರ ಸಾಲಿನಲ್ಲಿ ಬೀದರ ಜಿಲ್ಲೆ ಹುಮನಾಬಾದ್ ತಾಲ್ಲೂಕಿನ ಗಡವಂತಿ ಗ್ರಾಮದ ಸರ್ವೆ ನಂ. 45 ರಲ್ಲಿ ಖರೀದಿಸಿರುವ 7 ಎಕರೆ 34 ಗುಂಟೆ ಜಮೀನನ್ನು ರೂ. 4,16,000/- ಕ್ಕೆ ಖರೀದಿ ಮಾಡಿರುತ್ತಾರೆ. ಇದನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. |
| 4 | ಎದುರುದಾರರು ಅವರ ಮಗ ಶ್ರೀ ವಿವೇಕ ಬೀದಕರ್ ಇವರ ಹೆಸರಿನಲ್ಲಿ 2014-15 ರ ಸಾಲಿನಲ್ಲಿ ಅಫಜಲಪೂರ ತಾಲ್ಲೂಕಿನ ಗೊಬ್ಬೂರ (ಕೆ) ಗ್ರಾಮದ ಸರ್ವೆ ನಂ. 7/1 ರಲ್ಲಿ ಖರೀದಿಸಿರುವ 30 * 40 ಅಡಿ ಅಳತೆಯ ನಿವೇಶನ ನಂ. 8 ನ್ನು ರೂ. 88,000/- ಕ್ಕೆ ಖರೀದಿ ಮಾಡಿರುತ್ತಾರೆ. ಇದನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು |

| | |
|---|---|
| | ಪಡೆದಿರುವುದಿಲ್ಲ. ಈ ನಿವೇಶನ ಖರೀದಿ ಬಗ್ಗೆ ಎದುರುದಾರರು ಪೋಲೀಸರಿಗೆ ಸಲ್ಲಿಸಿದ ಸ್ಟೇಟ್‌ಮೆಂಟ್‌ಗಳಲ್ಲಿ ಯಾವುದೇ ಮಾಹಿತಿಯನ್ನು ಒದಗಿಸಿರುವುದಿಲ್ಲ. |
| 5 | ಎದುರುದಾರರು ಅವರ ಪತ್ನಿ ಶ್ರೀಮತಿ ವಿಜಯಲಕ್ಷ್ಮಿ ಇವರ ಹೆಸರಿನಲ್ಲಿ 2012-13 ರ ಸಾಲಿನಲ್ಲಿ ಹಾಲೆಂಡ್ ಟ್ರ್ಯಾಕ್ಟರ್ ನೋಂದಣಿ ಸಂಖ್ಯೆ ಕೆಎ-32 ಟಿಎ-4765 ಮತ್ತು ಟ್ರಾಲಿ ನೋಂದಣಿ ಸಂಖ್ಯೆ ಕೆ ಎ-32 ಟಿಎ-4766 ಇದನ್ನು ರೂ. 9,46,000/- ಗೆ ಖರೀದಿ ಮಾಡಿರುತ್ತಾರೆ. ಇದನ್ನು ಖರೀದಿಸಿದ ನಂತರ ಸಕ್ಷಮ ಪ್ರಾಧಿಕಾರಕ್ಕೆ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಅಡಿ ತಿಳಿಸಿರುವುದಿಲ್ಲ. |
| 6 | ಎದುರುದಾರರು ಅವರ ಪತ್ನಿ ಶ್ರೀಮತಿ ವಿಜಯಲಕ್ಷ್ಮಿ ಇವರ ಹೆಸರಿನಲ್ಲಿ 2014 ರ ಸಾಲಿನಲ್ಲಿ ಮಹೇಂದ್ರ ಜಿನಿಯೋ ಗೂಡ್ಸ್ ವಾಹನ ನೋಂದಣಿ ಸಂಖ್ಯೆ ಕೆಎ-32-ಸಿ-1810 ಇದನ್ನು ರೂ. 6,39,768/- ಕ್ಕೆ ಖರೀದಿ ಮಾಡಿರುತ್ತಾರೆ. ಇದನ್ನು ಖರೀದಿಸಿದ ನಂತರ ಸಕ್ಷಮ ಪ್ರಾಧಿಕಾರಕ್ಕೆ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಅಡಿ ತಿಳಿಸಿರುವುದಿಲ್ಲ. |
| 7 | ಎದುರುದಾರರು ಅವರ ಹೆಸರಿನಲ್ಲಿ 2008 ರ ಸಾಲಿನಲ್ಲಿ ಮಾರುತಿ ಸುಝುಕಿ ಸ್ವಿಫ್ಟ್ ಎಲ್. ಡಿ. ಐ. ಕಾರು ನೋಂದಣಿ ನಂ. ಕೆಎ-32-ಎಂ.7190 ನ್ನು ರೂ. 4,90,000/- ಕ್ಕೆ ಖರೀದಿ ಮಾಡಿರುತ್ತಾರೆ. ಇದನ್ನು ಖರೀದಿಸಿದ ನಂತರ ಸಕ್ಷಮ ಪ್ರಾಧಿಕಾರಕ್ಕೆ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಅಡಿ ತಿಳಿಸಿರುವುದಿಲ್ಲ. |
| 8 | ಎದುರುದಾರರು ಅವರ ಹೆಸರಿನಲ್ಲಿ 2006 ರ ಸಾಲಿನಲ್ಲಿ ಮಾರುತಿ ಸ್ವಿಫ್ಟ್ ಡಿಜೈರ್ ಕಾರು ನೋಂದಣಿ ನಂ. ಕೆಎ-32-ಎನ್-5561 ನ್ನು ರೂ. 5,85,769/- ಕ್ಕೆ ಖರೀದಿ ಮಾಡಿರುತ್ತಾರೆ. ಇದನ್ನು ಖರೀದಿಸಿದ ನಂತರ ಸಕ್ಷಮ ಪ್ರಾಧಿಕಾರಕ್ಕೆ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಅಡಿ ತಿಳಿಸಿರುವುದಿಲ್ಲ. |

| | |
|---|---|
| 9 | ಎದುರುದಾರರು ಅವರ ಮಗನಾದ ಶ್ರೀ ವಿವೇಕ ಚೀದರಕರ ಇವರ ಹೆಸರಿನಲ್ಲಿ 2006 ರ ಸಾಲಿನಲ್ಲಿ ಯೂನಿಕಾರ್ನ್ ದ್ವಿ ಚಕ್ರ ವಾಹನ ನೋಂದಣಿ ನಂ. ಕೆಎ-32-ಇಎಫ್.8475 ನ್ನು ರೂ. 65,601/- ಕ್ಕೆ ಖರೀದಿ ಮಾಡಿರುತ್ತಾರೆ. ಇದನ್ನು ಖರೀದಿಸಿದ ನಂತರ ಸಕ್ಷಮ ಪ್ರಾಧಿಕಾರಕ್ಕೆ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಅಡಿ ತಿಳಿಸಿರುವುದಿಲ್ಲ. |
| 10 | 1983 ರಿಂದ 2007-08 ಮತ್ತು 2011-12 ರ ಆಸ್ತಿ ದಾಯಿತ್ವ ಪಟ್ಟಿಗಳನ್ನು ಎದುರುದಾರರು ಅವರ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. |

4) ಎದುರುದಾರರು ತನಿಖೆ ಕಾಲದಲ್ಲಿ ಯಾವುದೇ ಸ್ಥಿರಾಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿಯನ್ನು ಪಡೆಯದೆ ನಿಯಮ 23 (2)(3) ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ನಿಯಮ 24 (3) (4) ರನ್ವಯ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ನಿಯಮಗಳನ್ನು ಪಾಲಿಸದೆ ಕರ್ತವ್ಯ ಲೋಪವೆಸಗಿರುವುದು ಮತ್ತು ಪ್ರಸ್ತುತ ಕ.ನಾ.ಸೇ.(ನಡತೆ) ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

5) ತನಿಖಾಧಿಕಾರಿಯವರು ಸಂಗ್ರಹಿಸಿದ ದಾಖಲೆಗಳಿಂದ ಎದುರುದಾರರು ಕಾನೂನು ಸಮ್ಮತ ಆದಾಯಕ್ಕಿಂತ ಅಸಮತೋಲನವಾಗಿ ಆಸ್ತಿಗಳನ್ನು ಎದುರುದಾರರ ಮತ್ತು ಅವರ ಕುಟುಂಬದ ಸದಸ್ಯರುಗಳ ಹೆಸರಿನಲ್ಲಿ ಹೊಂದಿರುವುದು ಹಾಗೂ ಅನುಮತಿ ಇಲ್ಲದೆ ಸ್ಥಿರಾಸ್ತಿ/ಚರಾಸ್ತಿಯನ್ನು ಖರೀದಿಸಿರುವುದು ಹಾಗೂ ಇತರೆ ಅಂಶಗಳು ಮತ್ತು ನಿಯಮಗಳನ್ನು ಪಾಲಿಸದೇ ಇರುವುದು ಎದುರುದಾರರ ದುರ್ನಡತೆಯನ್ನು ತೋರಿಸುತ್ತದೆ. ಎದುರುದಾರರು ತನಿಖೆ ಕಾಲದಲ್ಲಿ ಯಾವುದೇ ಸ್ಥಿರಾಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿಯನ್ನು ಪಡೆಯದೆ ನಿಯಮ 23 (2)(3) ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ

(ಪ್ರಸ್ತುತ ನಿಯಮ 24 (3) (4) ರನ್ವಯ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮಗಳನ್ನು ಪಾಲಿಸದೆ ಕರ್ತವ್ಯ ಲೋಪವೆಸಗಿರುವುದು ಮತ್ತು ಪ್ರಸ್ತುತ ಕ.ನಾ.ಸೇ.(ನಡತೆ) ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

6) ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ದಿನಾಂಕ 03/12/2021 ರಂದು ಸಲ್ಲಿಸಿರುತ್ತಾರೆ. ಎದುರುದಾರರ ಸಮಜಾಯಿಷಿಯನ್ನು ಪರಿಶೀಲಿಸಲಾಗಿ ತಮ್ಮ ಆಸ್ತಿ ಮತ್ತು ದಾಯಿತ್ವ ಪಟ್ಟಿಗಳ ವಿವರಗಳನ್ನು ಚೆಕ್ ಅವಧಿಯ ಬಗ್ಗೆ ಸಲ್ಲಿಸಿರುವುದಾಗಿ ಉಲ್ಲೇಖಿಸಿರುತ್ತಾರೆ. ಆದರೆ ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ 1983 ರಿಂದ 2007-08 ಮತ್ತು 2011 ಮತ್ತು 2012ರ ಆಸ್ತಿ ಮತ್ತು ದಾಯಿತ್ವ ಪಟ್ಟಿಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲವೆಂದು ನಮೂದಿಸಿರುತ್ತಾರೆ. ಇದಕ್ಕೆ ಪೂರಕವಾಗುವಂತೆ ಮುಖ್ಯ ಇಂಜನೀಯರ್‌ವರ ಕಛೇರಿ, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಕೆ. ಆರ್. ವೃತ್ತ ಬೆಂಗಳೂರು, ಇವರ ಪತ್ರ ಸಂಖ್ಯೆ ಸಂಕದ:725: ಸಕಾ.ಇಂ:ಲೋಕ್:ಇಸ್‌ಟಿ: 2016-17, ದಿನಾಂಕ 1/04/2017 ರಂದು ಎದುರುದಾರರು ತಮ್ಮ ಕಛೇರಿಗೆ ಆಸ್ತಿ ಮತ್ತು ದಾಯಿತ್ವ ಪಟ್ಟಿಗಳನ್ನು ಸಲ್ಲಿಸಿರುವ/ಸ್ವೀಕೃತಗೊಂಡಿರುವ ಬಗ್ಗೆ ದಾಖಲೆ ಇರುವುದಿಲ್ಲವೆಂದು ತನಿಖಾಧಿಕಾರಿಯವರಿಗೆ ಮಾಹಿತಿ ಸಲ್ಲಿಸಿರುತ್ತಾರೆ. (ಸದರಿ ದಾಖಲೆಯು ಕಡತ ಸಂಖ್ಯೆ-2, ಪುಟ ಸಂಖ್ಯೆ 140 ರಲ್ಲಿ ಇರುತ್ತದೆ.) ತನಿಖಾಧಿಕಾರಿಯವರು ತಮ್ಮ ತನಿಖಾ ವರದಿಯ ಸ್ಟೇಟ್‌ಮೆಂಟ್-ಬಿ ಯಲ್ಲಿ ಎದುರುದಾರರು ಸ್ಥಿರ ಮತ್ತು ಚರಾಸ್ತಿಗಳನ್ನು ಖರೀದಿಸಲು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದಿರುವುದಿಲ್ಲವೆಂದು ಮತ್ತು ಕರ್ನಾಟಕ ನಾಗರೀಕ ಸೇವಾ ನಿಯಮಗಳನ್ನು ಉಲ್ಲಂಘಿಸಿರುತ್ತಾರೆಂದು ಪುಟ ಸಂಖ್ಯೆ 102 ರಲ್ಲಿ ಉಲ್ಲೇಖಿಸಿರುತ್ತಾರೆ. ಆದರೆ ಎದುರುದಾರರು ಸ್ಥಿರ ಮತ್ತು ಚರಾಸ್ತಿಗಳನ್ನು ಖರೀದಿಸಲು ಇಲಾಖೆಯಿಂದ ಪೂರ್ವಾನುಮತಿಯನ್ನು ಪಡೆದ ಬಗ್ಗೆ ದಾಖಲಾತಿಗಳನ್ನು ತಮ್ಮ ಸಮಜಾಯಿಷಿಯ ಜೊತೆಗೆ ಸಲ್ಲಿಸಿರುವುದಿಲ್ಲ. ಆದ್ದರಿಂದ ಸದರಿಯವರ ಸಮಜಾಯಿಷಿಯು ವ್ಯತಿರಿಕ್ತ ಸಮಜಾಯಿಷಿಯಾಗಿದ್ದು ಆಪಾದನೆಗಳನ್ನು

ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ.

7) ಎದುರುದಾರರು ಸ್ಥಿರ ಆಸ್ತಿಗಳನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರಿಯವರಿಗೆ ಆದಾಯದ ಮೂಲದೊಂದಿಗೆ ಪೂರ್ವಾನುಮತಿ ಪಡೆದ ದಾಖಲಾತಿಗಳನ್ನು ಮತ್ತು ಚರಾಸ್ತಿಗಳನ್ನು ಖರೀದಿಸಿದ ನಂತರ ಒಂದು ತಿಂಗಳ ಅವಧಿಯೊಳಗೆ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸಿದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

8) ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು, ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಸದರಿಯವರು ತಮ್ಮ ವಿರುದ್ಧದ ನಡವಳಿಯನ್ನು ಕೈ ಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

9) ಆದ್ದರಿಂದ, ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) 2021 ನಿಯಮ 3 (1) (i) ರಿಂದ (iii) ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದೂ ಕೋರಿದೆ.

10) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ

ವರದಿಯನ್ನು ಸ್ವೀಕರಿಸಿದ <u>ಮೂರು ತಿಂಗಳೊಳಗೆ</u> ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

**(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)**
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.